7) ಕೊರಗ ಜನಾಂಗದ ಮಕ್ಕಳಿಗೆ ಮಂಗಳೂರು ತಾಲ್ಲೂಕಿನ ಮಂಡ್ಯ ಎಂಬಲ್ಲಿ ಕೇಂದ್ರೀಯ ಮಾದರಿ ವಸತಿಶಾಲೆ ನಿರ್ವಹಣೆ,

8) ವ್ಯವಸಾಯ ಜಮೀನು ಖರೀದಿ ಯೋಜನೆ,

9) ಗಿರಿಜನ ಉಪ ಯೋಜನೆಯಡಿ ಕೊರಗ ಜನಾಂಗದ ಅಭಿವೃದ್ಧಿಗೆ ಕೃಷಿ ತೋಟಗಾರಿಕೆ, ಪಶು ಸಂಗೋಪನೆ, ಗ್ರಾಮೀಂ ಸಣ್ಣ ಕೈಗಾರಿಕೆ ಮುಂತಾದ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ,

10) 10 ಕೊರಗ ಜನಾಂಗದವರ ಮನೆಗಳ ದುರಸ್ಥಿ

ಆ) ಎಲ್ಲಾ ಹತ್ತು ಕಾರ್ಯಕ್ರಮಗಳು ಜಾರಿಯಲ್ಲಿದ್ದು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿರುವ ಬೀಡಿ ಕಂಪನಿಗಳು

3 (117) : ಶ್ರೀ ಅಂಗಾರ್ ಎಸ್. (ಸೂಳ್ಯ) ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಅವಿಭಾಜ್ಯ ಉಡುಪಿ ಜಿಲ್ಲೆಯಲ್ಲಿ ಯಾವ ಯಾವ ಹೆಸರಿನ ಬೀಡಿ ಕಂಪನಿಗಳಿವೆ;

ಆ) ಇಲ್ಲಿ ದುಡಿಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು?)

ಇ) ಬೀಡಿ ಕಾರ್ಮಿಕರಿಗೆ ನೀಡಿರುವ ಸೌಲಭ್ಯಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟು ಜನ ಕಾರ್ಮಿಕರಿಗೆ ನೀಡಲಾಗಿದೆ? (ಕಳೆದ ಮೂರು ವರ್ಷಗಳ ವಿವರ ನೀಡುವುದು)

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು)

ಅ) ದಕ್ಷಿಣ ಕನ್ನಡ ಮತ್ತು ಅವಿಭಾಜ್ಯ ಉಡುಪಿ ಜಿಲ್ಲೆಯಲ್ಲಿ ಈ ಕೆಳಕಂಡ ಹೆಸರಿನ ಬೀಡಿ ಕಂಪನಿಗಳಿವೆ.

ದಕ್ಷಿಣ ಕನ್ನಡ ಜಿಲ್ಲೆ.

1) ದೇಸಾಯಿ ಬೀಡಿ, 2) ಡಿ.ಕೆ. ಪ್ರಾಡಕ್ಟ್ಸ್ ಬೀಡಿ, 3) ಎಸ್.ಕೆ. ಹೋಮ್ ಹೋಂ ಇಂಡಸ್ಟ್ರೀಸ್, 4) ಭಾರತ್ ಬೀಡಿ, 5) ಆನಂದ ಟೋಬಾಕೋ ಬೀಡಿ, 6) ಪ್ರಕಾಶ ಬೀಡಿ, 7) ಮಂಗಳೂರು ಗಣೇಶ ಬೀಡಿ, 8) ಮೆಟ್ರೋ ಬೀಡಿ, 9) ವಿವೇಕ ಸಂಘ ಬೀಡಿ, 10) ಸಿ.ಇ. ಟೊಬಾಕೋ ಬೀಡಿ, 11) ಸುಹಾಸಿನಿ ಬೀಡಿ, 12) ಕಣ್ಣೂರು ಬೀಡಿ, 13) ಗ್ರೇಟ್ ದರ್ಬಾರ್ ಬೀಡಿ, 14) ಗುರುಕೃಪ ಬೀಡಿ, 15) ರೈಫಲ್ ಬೀಡಿ, 16) ದೀಪಕ್ ಎಂಟರ್ ಪ್ರೈಸೆಸ್ ಬೀಡಿ, 17) ಪಿವಿಎಸ್ ಬೀಡೀಸ್, 18) ನಸೀಮಾ ಬೀಡಿ, 19) ಶರ್ಮೀಳಾ ಬೀಡಿ, 20) ಮಂಗಳೂರು ಅಜಾದ್ ಬೀಡಿ, 21) ಬಿ.ವಿ. ಬಾಳಿಗಾ ಅಂಡ್ ಬಾಬಾ ಬೀಡೀಸ್, 22) ಮಂಗಳೂರು ಶುಭಾ ಬೀಡೀಸ್, 23) ಮಂಗಳೂರು ಸುಲ್ತಾನ್ ಬೀಡಿ, 24) ಕೆ.ಎಸ್. ಬೀಡೀಸ್, 25) ಸತೀಶ್ ಬೀಡಿ, 26) ಅಲಂಕಾರ್ ಬೀಡಿ, 27) ನಬರ್ ಬೀಡಿ, 28) ಮಹಾಲಕ್ಷ್ಮಿ ಬೀಡಿ, 29) ಸಿಂಗಾರಿ ಬೀಡಿ, 30) ಜನತಾ ಬೀಡಿ, 31) ಮಂಗಳೂರು, ಅಮೀನ್ ಬೀಡಿ, 32) ಮಂಗಳೂರು ಏ-1 ಬೀಡಿ, 33) ಅನಿತಾ ಬೀಡಿ, 34) ಮಂಗಳೂರು ಪ್ರೀತಿ

ಬೀಡಿ, 35) ಮಂಗಳೂರು ಅಮರ್ ಬೀಡಿ, 36) ಗಣಪತಿ ಕೀ ಇಂಡಸ್ಟ್ರೀಸ್ 37) ಸದರನ್ ಇಂಡಿಯಾ ಬೀಡಿ, 38) ಜೆ.ಪಿ. ಟೊಬಾಕೋ ಪ್ರಾಡೆಕ್ಟ್ಸ್, 39) ಮಂಗಳೂರು ಮಧುರಾ ಬೀಡಿ, 40) ನಂ.69 ಆರ್‌ಎಸ್ ಬೀಡಿ.

ಅವಿಭಾಜಿತ ಉಡುಪಿ ಜಿಲ್ಲೆ:

1) ಶರ್ಬೂದ್ದೀನ್ ಜಾಫರ್ ಅಂಡ್ ಕಂಪನಿ ಬೀಡಿ, 2) ಮನೋಹರ್ ಬೀಡಿ, 3) ಭಾರತ್ ಬೀಡಿ, 4) ಎಸ್.ಕೆ. ಹೋಂ ಇಂಡಸ್ಟ್ರೀಸ್, 5) ಶಕ್ತಿ ಬೀಡಿ, 6) ರಫೀಕ್ ಬೀಡಿ ವರ್ಕ್ಸ್, 7) ಮುಸ್ತೀರ್ ಬೀಡಿ.

ಕಾರ್ಕಳ ತಾಲ್ಲೂಕು:

1) ಶಹನಾಯಿ ಬೀಡಿ, 2) ಸದರನ್ ಇಂಡಿಯಾ ಬೀಡಿ, 3) ಪಿಕೆಟಿಸಿ ಕರಿಯೂರು ಕಾರ್ಕಳ ಬೀಡಿ, 4) ಜೆ.ಪಿ. ಕೋವಿಕೋ ಬೀಡಿ, 5) ಭಾರತ್ ಬೀಡಿ.

ಕುಂದಾಪುರ ತಾಲ್ಲೂಕು:

1) ಕರಾವಳಿ ಸ್ಪೆಷಲ್ ತಿರುಪತಿ ಬೀಡಿ.

ಆ) 1) ಮಂಗಳೂರು : 1,90,438
2) ಬಂಟ್ವಾಳ : 39,631
3) ಪುತ್ತೂರು–ಸುಳ್ಯ : 30,658
4) ಬೆಳ್ತಂಡಿ : 9,098
5) ಉಡುಪಿ : 13,768
6) ಕಾರ್ಕಳ : 19,626
7) ಕುಂದಾಪುರ : 6,000

ಇ) 1) ಮಂಗಳೂರು : 1,11,955
2) ಬಂಟ್ವಾಳ : 39,176
3) ಪುತ್ತೂರು : 3,254
4) ಬೆಳ್ತಂಗಡಿ : 9,918

ರಾಜ್ಯದಲ್ಲಿ ಸರ್ವ ಶಿಕ್ಷಣ ಯೋಜನೆಯ ಅನುಷ್ಠಾನದ ಬಗ್ಗೆ

5 (121) : ಶ್ರೀ ಅಂಗಾರ್ ಎಸ್. (ಸೂಳ್ಯ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ವ ಶಿಕ್ಷಣ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗಿದೆ;

ಆ) ಈ ಯೋಜನೆಯಡಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಎಷ್ಟು ಅನುದಾನ ಬಿಡುಗಡೆ ಮಾಡಿದೆ; (ವರ್ಷಾವಾರು ಯೋಜನಾವಾರು ಬಿಡುಗಡೆಯಾಗಿರುವ ಅನುದಾನದ ಮಾಹಿತಿ ನೀಡುವುದು)

ಶ್ರೀ ಧರ್ಮಸಿಂಗ್ (ಸನ್ಮಾನ್ಯ ಮುಖ್ಯಮಂತ್ರಿಯವರು)

ಅ) ರಾಜ್ಯದಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯನ್ನು 2001–02ನೇ ಸಾಲಿನಿಂದ ಜಾರಿಗೆ ತರಲಾಗಿದೆ.